ಎಂದು ಛೇಡಿಸೋ ಧ್ವನಿಯೊಳಗ ಜಾಜಿ ಕೇಳಿದಳು. ಮೀರಾಳ ಧ್ವನಿ ಕಣ್ಣೀರಿನ ಭಾವಿಯಿಂದ ಬಂತು... 'ಇಲ್ಲಾ... ಜಾಜಿ... ಎರಡನೇ ಮಗು ಹುಟ್ಟಲಿಕ್ಕೇ ಬಿಡಲಿಲ್ಲ ಅವರು... ತೆಗೆಸಿ ಬಿಟ್ಟರು... ಹೆಣ್ಣು ಅಂತ ಹೇಳಿ ತೆಗೆಸಿ ಬಿಟ್ಟರು... ಒಂದಲ್ಲ ಕಣ್ರೇ... ನಾಲ್ಕು... ನಾಲ್ಕು ತೆಗೆಸಿ ಬಿಟ್ಟರು...' ಅಳುತ್ತಾ ಹೇಳಿದಳು, 'ನನ್ನ ಮಗಳು ಈಗ ನನ್ನ ಉಗಿದು ಉಗಿದು ಹಾಕ್ತಾಳೆ ಕಣ್ರೆ... ಅಮ್ಮಾ, ನಿನಗೆ ಬುದ್ಧಿ ಇರಲಿಲ್ಲವೇನೇ? ಹಿಂಗೆಲ್ಲಾ ಮಾಡಿಸಿಕೊಂಡೆಯಲ್ಲ?...ಅವಳಿಗೂ ಅವಳಪ್ಪನಿಗೂ ದಿನಾ ಜಗಳ ಕಣ್ರೆ...ಯಾವ ಸೀಮೆ ಸೈಂಟಿಸ್ಟು ನೀನು?! ಅಂತ ಅವರಪ್ಪನ ಮಾನಾ ತೆಗೀತಾಳೆ ಕಣ್ರೆ... ನಾನೇನು ಮಾಡಲಿ ಜಾಜಿ?... ನನ್ನ ಮಗಳು ನಮ್ಮ ಜೊತೆಯಲ್ಲಿ ಇಲ್ಲಾ ಕಣ್ರೆ ಜಾಜಿ... ಅವರಪ್ಪನಿಗೆ ಅಸಹ್ಯ ಪಟ್ಟುಕೊಂಡು ಪಿ.ಜಿ.ಯಲ್ಲಿದ್ದಾಳೆ. ಅಪ್ಪನಿಗೂ ಮಗಳಿಗೂ ಮಾತೇ ಇಲ್ಲ ರೀ... ಇನ್ನು ಅವಳ ಮದುವೆ ಎಲ್ಲಿಯದು ಜಾಜಿ... ನಾನು ಹದಿನಾರನೇಯ ವಯಸ್ಸಿಗೇ ಮದುವೆಯಾಗಿ, ಹದಿನೇಳಕ್ಕೆ ಒಂದು ಹೆತ್ತೆ. ಮಗಳು ತುಂಬಾ ಮುದ್ದಾಗಿದ್ದಳು ಕಣ್ರೆ. ಮತ್ತೆ ಎರಡು ವರ್ಷದಲ್ಲೇ ನಾಲ್ಕು ಜೀವ ತಗದು ಬಿಟ್ಟರೂರಿ.... ಈಗೀಗ... (ಬಿಕ್ಕಳಿಸುತ್ತ) ಈಗೀಗ...ಯಾಕೋ ಆ ಮಕ್ಕಳನ್ನ ಉಳಿಸ್ಕೋಬೇಕಾಗಿತ್ತು. ಕೊಂದುಬಿಟ್ಟೆ... ಮಹಾ ಪಾಪಿ ನಾನು ಅನಿಸುತ್ತೆ ಕಣ್ರೆ... ಇವರ ಮಾತಿಗೆ ಕೋಲೆ ಬಸವನ ಹಾಗೆ ತಲೆಯಾಡಿಸಿ ಮಹಾ ಪಾಪ ಮಾಡಿದೆ... ಪಾಪಿ ನಾನು... ವಿಪರೀತ ಗಿಲ್ಟು ಫೀಲ್ ಆಗ್ತಾ ಇದೆ ಕಣ್ರೆ... ಊಟ ಸೇರಲ್ಲಾ... ಇವರ ಮುಖ ನೋಡೋಕ್ ಆಗಲ್ಲಾ... ಜೀವನಾ ಸಾಕಾಗಿ ಹೋಗಿದೆ ಯಪ್ಪಾ ದೇವರೇ...' ಇಷ್ಟು ಅಸಹಾಯ ಸ್ಥಿತಿಯಲ್ಲಿ ಮೀರಾಳನ್ನು ಎಂದೂ ಯಾರೂ ಕಂಡಿರಲಿಲ್ಲ! ಅಕೀಯ ಮನಸ್ಸು ತೂಬೊಡೆದ ಕೆರಿ ಹಾಂಗ ಆಗಿತ್ತು.

ಜಾಜಿಗೆ ಒಳಗೆಲ್ಲಾ ವಿಚಿತ್ರ ವೇದನೆ. ತಾನು ಹೆಣ್ಣು ಅದೂ ಮೂರನೆಯದೆಂದು ತಿಳಿದಾಗ ತನ್ನಮ್ಮ ತನ್ನನ್ನೂ ತೆಗೆಸಿಬಿಡಲು ಹೋಗಿದ್ದಳಲ್ಲವೇ?... ಡಾ. ಶಕುಂತಲೆ ಇಲ್ಲದಿದ್ದರೆ ನಾನು ಈ ಭೂಮಿಯ ಮೇಲೆಯೇ ಇರುತ್ತಿರಲಿಲ್ಲ. ತಾನೇನೋ... ಬೇಡವಾಗಿಯೂ ಹುಟ್ಟಿದ ಕವನ... ಹುಟ್ಟದ ಕವನಗಳ ತಾಯಿಯ ನೋವೇನೋ?...

ಮೀರಾಳ ಹೆಡ್ ಮಾಸ್ತರಿಣಿ ಮೀರಾಳ ತಲಿ ನೇವರಿಸಿಗೋತ ನಿಂತಿದ್ದರು.

---

## ಜಾಹ್ನವಿ ಆನಂದ ಹಳ್ಳೂರ

ಮೂಲತಃ ಗದಗಿನ ಕೋಳಿವಾಡದವರು. ಬಿ.ಕಾಂ ನಂತರ ಎನ್‌ಐಐಟಿಯಲ್ಲಿ ಕಂಪ್ಯೂಟರ್ ಡಿಪ್ಲೋಮಾ ಮಾಡಿದ್ದಾರೆ. ಬಳಿಕ ಬೆಂಗಳೂರು ವಿಶ್ವವಿದ್ಯಾಲಯದಿಂದ ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಎಂಟು ವರ್ಷಗಳ ಕಾಲ ಕನ್ನಡೇತರರಿಗಾಗಿ ಕನ್ನಡ ತರಬೇತಿ, ಶಿಬಿರಗಳನ್ನು ನಡೆಸಿದ್ದಾರೆ. ಕನ್ನಡ ಶಿಕ್ಷಕಿಯಾಗಿಯೂ ಕೆಲಸ ಮಾಡಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.